Sri Kadidal MANJAPPA.—It is left to the discretion of the local engineers. They can entrust the work on piecemeal basis or on the basis of estimated repairs.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಇದನ್ನು ಫ್ರೀಸ್. ವರ್ಕ್ ಮೇಲೆ ಕೊಟ್ಟಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಎಸ್ಟಿಮೇಟ್ ಆಗಿರುವ ರೇಟ್ ಮೇಲೆ ಕೊಟ್ಟಿದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಇದನ್ನು ಟೆಂಡರ್ ಕರೆದು ಕೊಟ್ಟಿದ್ದರೆ ಇನ್ನೂ ಸೇಕಡ 25, 30 ಕಡಮೆ ಬೀಳುತ್ತಿತ್ತೆಂಬುದು ತಮಗೆ ಗೊತ್ತೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಶ್ರೀ ಪುಟ್ಟ ಗಂಗಯ್ಯ ಎನ್ನುವವರಿಗೆ ಕೊಟ್ಟಿದೆಯೆಂದು ಹೇಳಿದ್ದೀರಿ. ಎಗ್ಸಿಕ್ಯೂಟಿವ್ ಎಂಜಿನಿಯರು ಹೇಳಿದ್ದರ ಮೇಲೆ ತಾನೆ ಅವರಿಗೆ ಕೊಟ್ಟಿದ್ದು?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಇದಕ್ಕೆ ಜನಗಳಿಂದ ಏನಾದರೂ ಟೆಂಡರು ಕರೆಯಲಿಲ್ಲವೆಂದು ಹೇಳಿ ಆಕ್ಷೇಪಣೆಗಳು ಸರ್ಕಾರಕ್ಕೆ ಬಂದಿವೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರಕ್ಕೆ ಬಂದಿದ್ದ ಹಾಗೆ ನೆನಪಿಲ್ಲ.

Water Supply in Kunigal Town

Q.—648. Sri T. N. MUDLAGIRI GOWDA (Kunigal).—

Will the Government be pleased to state:—

(*a*) the quantity of water supplied to Kunigal Town under the water supply scheme;

(*b*) the population of Kunigal Town;

(*c*) (i) the amount deposited in Government by the Municipality for borewells and tanks;

(ii) when the amount was deposited;

(*d*) when the borewell pump to Kunigal Municipality will be supplied?

A.—Sri Kadidal MANJAPPA (Minister for Revenue and Public Works).—

(*a*) 22,000 gallons per day.

(*b*) 8,902 (as per Census of 1951).

(*c*) (i) Rs. 7,000 for sinking two additional bore-wells.

(ii) During December 1951 and April 1952.

(*d*) After about 8 to 9 months' time a drill can be sent to Kunigal as it is the nineteenth work in the priority list. Pumps will have to be supplied after the bore-wells are sunk and yield tested.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಕುಣಿಗಲ್ ಟೌನಿನಲ್ಲಿ ಒಳ್ಳೆಯ ನೀರು ಸಿಕ್ಕದೆ ಜನರಿಗೆ ಮಲೇರಿಯಾ ಹೆಚ್ಚಾಗಿ ತಗಲೆದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಮಲೇರಿಯಾ ಹೆಚ್ಚಾಗಿ ಬಂದಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲ; ನೀರಿನ ಅಭಾವವಿದೆಯೆಂದು ಗೊತ್ತಾಗಿದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಎಲ್. ಎಸ್. ಜಿ. ಪಂಂತ್ರಿಗಳು ಕುಣಿಗಲ್ ಟೌನನ್ನು inspection ಮಾಡುವ ಕಾಲದಲ್ಲಿ 20—30 ಕಡೆ ಸಾಲುಗಟ್ಟರೆ ಪಾತ್ರೆಗಳನ್ನಿಟ್ಟುಕೊಂಡು ನೀರಿಗೆ ತೊಂದರೆಪಡುತ್ತಿರುವುದನ್ನು ಕಂಡಿದ್ದಾರೆ. ಅದು ಸರ್ಕಾರದ ಗಮನಕ್ಕೆ ಬಂದಿದೆಯಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಪ್ರೈಯಾರಿಟಿ ಲಿಸ್ಟಿನಲ್ಲಿ ಇದು 19ನೆಯದು ಎಂದು ಹೇಳಿದ್ದೀರಿ. ಇಲ್ಲಿನ ನೀರಿನ ವ್ಯವಸ್ಥೆಗೆ ಪ್ರೈಯಾರಿಟಿ ಕೊಟ್ಟ ಡ್ರಿಲಿಂಗ್ ಮೆಷಿನನ್ನು ಬೇಗ ತರಿಸಿಕೊಡುವುದಕ್ಕೆ ಸಾಧ್ಯವೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲೇ ಹೇಳಿದ್ದೇನೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಇನ್ನು 8—9 ತಿಂಗಳಾಗುತ್ತದೆಂದು ಹೇಳಿದ್ದೀರಿ. ಇನ್ನೂ ಜಾಗ್ರತೆ ತರಿಸಿಕೊಡುವುದಕ್ಕೆ ಸಾಧ್ಯವೇ?

ಶ್ರೀ ಕಡಿದಾಳ್ ಮಂಜಪ್ಪ.—ಆದಷ್ಟು ಜಾಗ್ರತೆ ಕುಣಿಗಲ್ ತಾಲ್ಲೂಕಿಗೆ ಡ್ರಿಲಿಂಗ್ ಮೆಷೀನನ್ನು ಕಳುಹಿಸಿ ಕೊಡುತ್ತೇವೆ.

Restoration of Kembalalu tank in Kunigal Taluk.

Q.—650. Sri T. N. MUDLAGIRI GOWDA (Kunigal).—

Will the Government be pleased to state:—

(*a*) the number of minor and major tanks in Gulur and Hebbur Hoblis of Tumkur Taluk and Kottagere and Kasaba Hobly of Kunigal Taluk;

(*b*) the total extent of the atchkat behind all these tanks;

(*c*) the names of tanks restored during the last five years;

(*d*) the capacity of Kembalalu Tank; the extent of land under cultivation in the atchkat of this Tank;

(*e*) since how many years the raiyats under this tank are requesting Government to restore this tank in view of the fact that it is being silted with sand?

A.—Sri Kadidal MANJAPPA (Minister for Revenue and Public Works).—

	Major	*Minor*
(*a*) Hebbur Hobli	6	28
Gulur Hobli	8	17
Kottagere Hobli	3	18
Kunigal Kasaba Hobli	5	4
(*b*) Hebbur Hobli	..	3,288
Gulur Hobli	..	2,143
Kottagere Hobli	..	1,226
Kunigal Kasaba Hobli		3,845

(*c*) Nil in these particular hoblis.

(*d*) 160 units ; 792 acres.

(*e*) The restoration of this tank is being urged for the last six years. But the proposal is found to be not feasible on investigation.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇಲ್ಲಿ ಕೊಟ್ಟಿರತಕ್ಕ ಮೈನರ್ ಕೆರೆಗಳ ನಂಬ್ಯೆ ಸರಿಯಾಗಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನಮಗೆ ಬಂದಿರತಕ್ಕ ವರದಿಯ ಪ್ರಕಾರ ಸರಿಯಾಗಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—5 ವರ್ಷಗಳಿಂದಲೂ ಯಾವ ಕೆರೆಯನ್ನೂ ರಿಪೇರಿಮಾಡಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದೀರಿ. ಇದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಅಷ್ಟೊಂದು urgency ಇರಲಿಲ್ಲ. Urgency basis ಮೇಲೆ ಕೆರೆಗಳನ್ನು ನಾವು ಜೀರ್ಣೋದ್ಧಾರ ಮಾಡುತ್ತಿದ್ದೇವೆ. ಬಹುಶಃ ಈ ಹೋಬಳಿಯಲ್ಲಿರತಕ್ಕ ಕೆರೆಗಳನ್ನು ರಿಪೇರಿಮಾಡುವುದಕ್ಕಿಂತ ಬೇರೆ ಹೋಬಳಿಯಲ್ಲಿರತಕ್ಕ ಕೆರೆಗಳನ್ನು ಜೀರ್ಣೋದ್ಧಾರ ಮಾಡುವುದು ನೂಕ್ತವೆಂದು ಕಂಡುಬಂದಿದ್ದರಿಂದ, ಇದನ್ನು ಕೈಗೊಳ್ಳಲಿಲ್ಲವೆಂದು ಹೇಳಬಹುದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇಂಜನಿಯರುಗಳ ಮನಸ್ಸಿಗೆ urgency ಇಲ್ಲವೆಂದು ತೋರಿತೋ ಅಥವಾ ಸರ್ಕಾರದ ಮೇಲೆ ಈ ವಿಷಯದಲ್ಲಿ ಹೆಚ್ಚಿಗೆ ಒತ್ತಾಯ ಬರಲಿಲ್ಲವೆಂದು ಹೀಗಾಯಿತೋ ?

ಶ್ರೀ ಕಡಿದಾಳ್ ಮಂಜಪ್ಪ.—ಒತ್ತಾಯವನ್ನು ಇದು ಅವಲಂಬಿಸುವುದಿಲ್ಲ. ಸ್ಥಳೀಯ ಎಂಜಿನಿಯರುಗಳ ಅಭಿಪ್ರಾಯದ ಮೇರೆ ಹೋಗುತ್ತದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಸಾಮಾನ್ಯವಾಗಿ ಈ ಮೈನರ್ ಟ್ಯಾಂಕುಗಳಲ್ಲಿ ಯಾವ ಕೆರೆಗಳಲ್ಲೂ ವರ್ಷೇ ವರ್ಷೇ ಪೂರ್ತಿಯಾಗಿ ಫಸಲು ಬರುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನಿನ್ನೆ ದಿವಸವೇ ನಾನು ಹೇಳಿದ್ದೇನೆ, ಬಹಳ ಕೆರೆಗಳು ದುರಸ್ತಾಗಬೇಕಾಗಿವೆ ಅವುಗಳನ್ನೆಲ್ಲಾ urgency basis ಮೇಲೆ ಮಾಡುತ್ತಿದ್ದೇವೆ.

ಶ್ರೀ ಟಿ. ಎಚ್ ಮೂಡಲಗಿರಿಗೌಡ.—ತುಮಕೂರು ತಾಲ್ಲೂಕಿನಲ್ಲಿ ಎರಡು ಹೋಬಳಿಗಳಲ್ಲಿ ಪೂರ್ತಿಯಾಗಿ ಎಲ್ಲಾ ಕೆರೆಗಳೂ ದುರಸ್ತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು.

ಶ್ರೀ ಟಿ. ಎಚ್ ಮೂಡಲಗಿರಿಗೌಡ.—ಒಬ್ಬರು ಹೋಬಳಿಯ ಒಂದು ಕೆರೆಯನ್ನೂ ಕೂಡ ರಿಪೇರಿಗೆ ತೆಗೆದುಕೊಳ್ಳದಿರುವುದಕ್ಕೆ ಕಾರಣವೇನೆಂಬುದನ್ನು ಸ್ಪಷ್ಟವಾಗಿ ಹೇಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆಗಲೇ ಹೇಳಿದ್ದೇನೆ.

ಶ್ರೀ ಟಿ. ಎಚ್ ಮೂಡಲಗಿರಿಗೌಡ.—ಕಂಬಳಲು ಕೆರೆಯ capicity 160 ಯೂನಿಟ್ಸು ಎಂದೂ, 792 ಎಕರೆಗಳು ಅದರ ಹಿಂದೆ ಸಾಗುವಳಿಯಲ್ಲವೆಯೆಂದೂ ಹೇಳಿದ್ದೀರಿ. 160 ಯೂನಿಟ್ಸುಗಳಿಂದ 792 ಎಕರೆಗಳನ್ನು ಸಾಗುವಳಿಮಾಡುವುದಕ್ಕಾಗುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಆಗುತ್ತದೆ, according to the information we have received.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇದರ ಜೀರ್ಣೋದ್ಧಾರದ ಬಗ್ಗೆ ಏನಾದರೂ ಏರ್ಪಾಡು ಮಾಡಿದ್ದೀರಾ ಎಂದು ಕೇಳಿದ್ದಕ್ಕೆ 'Not feasible' ಎಂದು ಹೇಳಿದ್ದೀರಿ. ಹಾಗಾದರೆ, ಇಲ್ಲಿ ಸಾಗುವಳಿಯನ್ನು ಯಾವ ರೀತಿ ಉತ್ತಮಪಡಿಸುವುದಕ್ಕೆ ಏರ್ಪಾಡು ಮಾಡಿದ್ದೀರಿ ?

Sri Kadidal MANJAPPA.—That is a separate question. It is repeated that the raising of the weir of the tank will submerge a large area of the valuable wet lands under Naguvalli tank.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇದನ್ನು ಮುಚ್ಚಿಕೊಂಡಿರತಕ್ಕ ಹೂಳನ್ನು ತೆಗೆಯಿಸುವುದಕ್ಕೇನಾದರೂ ಏರ್ಪಾಡುಮಾಡುತ್ತೀರಾ ?

Sri Kadidal MANJAPPA.—That we will consider ; but it will be a costly affair.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈಗಾಗಲೇ ಅನೇಕ ಕೆರೆಗಳಲ್ಲಿ ಹೂಳು ತೆಗೆಯುವುದು, ಜೀರ್ಣೋದ್ಧಾರ ಮಾಡುವುದು ಮುಂತಾದ ಕೆಲಸಗಳನ್ನು ಕೈಕೊಂಡಿದ್ದಾರೆ, ಇದಕ್ಕೂ ಅದೇ ಮಾರ್ಗವನ್ನನುಸರಿಸುವುದಕ್ಕಾಗುವುದಿಲ್ಲವೆ ?

Sri Kadidal MANJAPPA.—If feasible we will do it.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಮೈನರ್ ಕೆರೆಗಳನ್ನು ಈ ವರ್ಷ ರಿಪೇರಿಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಶಾಸನಸಭಾ ಸದಸ್ಯರು ಯಾವ ಯಾವ ಕೆಲಸಗಳನ್ನು ಮುಖ್ಯವಾಗಿ ತೆಗೆದುಕೊಳ್ಳಬಹುದೆಂದು ಪಟ್ಟಿಯನ್ನು ಕೊಟ್ಟರೆ, ಸಮಾಲೋಚನೆಮಾಡಿ, ಯಾವ ಯಾವುದನ್ನು ತೆಗೆದುಕೊಳ್ಳಬೇಕೆಂಬುದನ್ನು ಮಂತ್ರಿಮಂಡಲದಲ್ಲಿ ನಿರ್ಧಾರ ಮಾಡುತ್ತೇವೆ.

Repairing the Karanjee Tank in Chickmagalur Town.

Q.—681. Sri G. PUTTASWAMY (Chikmagalur-Mudigere—Scheduled Castes).—

Will the Government be pleased to State :—

(*a*) (i) the number of years that have elapsed since the old